ಸಾಮಾನ್ಯ ವರ್ಗಾವಣೆ ಸಮಯದಲ್ಲಿ ವರ್ಗಾಯಿಸಲಾಗಿದೆ. ಸಿಬ್ಬಂದಿಗಳು ಕಾರ್ಯ ಹಂಚಿಕೆಯನ್ನು ಸಹ ಕಾಲಕಾಲಕ್ಕೆ ಬದಲಾಯಿಸಲಾಗುತ್ತಿದೆ. ಸರ್ಕಾರದ ಮುಂದಿನ ವರ್ಗಾವಣೆ ಅವಧಿಯಲ್ಲಿ ವರ್ಗಾವಣೆ ಮಾರ್ಗಸೂಚಿಗಳನ್ವಯ ಮುಂದಿನ ಕ್ರಮತೆಗೆದುಕೊಳ್ಳಲಾಗುವುದು.

ಮಾಗಡಿ ಕ್ಷೇತ್ರದ ಆಸ್ಪತ್ರೆ ಕಟ್ಟಡಗಳು.

775(1204) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97, 1997-98 ಮತ್ತು 1998-99ನೇ ಸಾಲಿನಲ್ಲಿ ತಾವರೆಕೆರೆ ಸೇರಿದಂತೆ ಮಾಗಡಿ ಕ್ಷೇತ್ರದ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಘಟಕ, ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ ಮಂಜೂರು ಮಾಡಿ ಆರಂಭಿಸಲಾಗಿದೆ?

ಆ) 1996-97, 1997-98 ಮತ್ತು 1998-99ನೇ ಸಾಲಿನಲ್ಲಿ ಮಾಗಡಿ ಕ್ಷೇತ್ರದಲ್ಲಿ ವಿಶ್ವಬ್ಯಾಂಕ್ ನೆರವಿನ ಯೋಜನೆಯು ಒಳಗೊಂಡಂತೆ ವಿವಿಧ ಯೋಜನೆಗಳಡಿ ಎಲ್ಲೆಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಘಟಕ, ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆಗಳ ಕಟ್ಟಡ ಮಂಜೂರು ಮಾಡಿ ಕಾಮಗಾರಿ ಆರಂಭಿಸಲಾಗಿದೆ? (ಪ್ರತಿ ಕಾಮಗಾರಿಗಳಿಗೆ ತಗುಲಿದ ವೆಚ್ಚವೆಷ್ಟು)?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾಗಿದೆ (1997-98) ಮಾಗಡಿ ತಾಲ್ಲೂಕಿನ ವೀರೇಗೌಡನ ದೊಡ್ಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾಗಿದೆ (1997-98).

ಆ) ಮಾಗಡಿ ತಾಲ್ಲೂಕಿನ ಸಮುದಾಯ ಆರೋಗ್ಯ ಕೇಂದ್ರ ಕಟ್ಟಡವನ್ನು ವಿಶ್ವ ಬ್ಯಾಂಕ್ ನೆರವಿನ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸುವ ದಿಸೆಯಲ್ಲಿ 1997-98ರಲ್ಲಿ 67,12,860-00 ಮತ್ತು 1998-99ರಲ್ಲಿ 40,10,753-00 ಖರ್ಚಾಗಿದ್ದು ವಿದ್ಯುಚ್ಛಕ್ತಿ ಸರಬರಾಜನ ಕಾಮಗಾರಿ ನಡೆದಿರುತ್ತದೆ. ಜಿಲ್ಲಾ ಪಂಚಾಯತ್ ಯೋಜನೆಯಲ್ಲಿ:- (1) 1997-98ರಲ್ಲಿ ಮಣಿಗಾನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಕಾರ್ಯವನ್ನು ಕೈಗೊಂಡು ರೂ. 2.60 ಲಕ್ಷ ಖರ್ಚಾಗಿದ್ದು ಪ್ಲಾಸ್ಟರಿಂಗ್ ಹಂತದಲ್ಲಿದೆ. 1997-98 ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ವೀರೇಗೌಡನದೊಡ್ಡಿ ಕಟ್ಟಡದ ಕಾರ್ಯವನ್ನು ಕೈಗೊಂಡು ರೂ.7.59 ಲಕ್ಷ ಖರ್ಚಾಗಿದ್ದು ರೂಫ್‌ಲೆವೆಲ್ ಹಂತದಲ್ಲಿದೆ. 1997-98 ರಲ್ಲಿ ತಿಪ್ಪಸಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಕಾರ್ಯವನ್ನು ಕೈಗೊಂಡು ರೂ.6,31,000-00 ಖರ್ಚಾಗಿದ್ದು ರೂಫ್‌ಲೆವೆಲ್ ಹಂತದಲ್ಲಿದೆ.